ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 273
2. ಸದಸ್ಯರ ಹೆಸರು : ಶ್ರೀ ಎಸ್.ನಾಗರಾಜ್ (ಸಂದೇಶ್ ನಾಗರಾಜ್)
3. ಉತ್ತರಿಸಬೇಕಾದ ದಿನಾಂಕ : 16-07-2019
4. ಉತ್ತರಿಸುವ ಸಚಿವರು : ಮಾನ್ಯ ಜಲ ಸಂಪನ್ಮೂಲ ಸಚಿವರು

ಕ್ರ ಸಂ	ಪ್ರಶ್ನೆಗಳು	ಉತ್ತರಗಳು
ಅ	ಹುಣಸೂರು ತಾಲ್ಲೂಕಿನಲ್ಲಿ ಹರಿಯುತ್ತಿರುವ ಲಕ್ಷ್ಮಣತೀರ್ಥ ನದಿಯು ಕಲುಷಿತವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;	ಗಮನಕ್ಕೆ ಬಂದಿರುತ್ತದೆ.
ಆ	ಸುಮಾರು 33 ಕಡೆ ಈ ನದಿಗೆ ಕಲುಷಿತ ನೀರು ಬಂದು ಸೇರುತ್ತಿರುವುದರಿಂದ ಹನಗೋಡು ಸುತ್ತಮುತ್ತ ಶುಂಠಿ ಶುದ್ದೀಕರಣ ಘಟಕಗಳಿಂದ ಅಪಾಯಕಾರಿ ತ್ಯಾಜ್ಯ ನದಿಯ ಒಡಲನ್ನು ಸೇರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;	ಮೂರು ಶುಂಠಿ ಶುದ್ದೀಕರಣ ಘಟಕಗಳಿಂದ ಬರುವ ತ್ಯಾಜ್ಯವನ್ನು ಇಂಗು ಗುಂಡಿಗಳಿಗೆ ಹರಿಸುತ್ತಿರುವುದು ಹಾಗೂ ಪಟ್ಟಣದ ಚರಂಡಿ ನೀರು ನದಿಗೆ ಸೇರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.
ಇ	ಹುಣಸೂರು ನಗರದ ಕಟ್ಟೆ ಮಳಲವಾಡಿಯಿಂದ ಪಟ್ಟಣದ ಪಂಪ್‌ಹೌಸ್ ವರೆಗೆ ನದಿಯ ನೀರು ಕಲುಷಿತವಾಗಿದ್ದು, ಕುಡಿಯಲು ಮತ್ತು ಬಳಕೆಗೆ ಅಯೋಗ್ಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;	ನದಿಯಲ್ಲಿ ಗಣನೀಯ ಪ್ರಮಾಣದಲ್ಲಿ ಬೇಸಿಗೆಯಲ್ಲಿ ನೀರಿನ ಹರಿವು ಇಲ್ಲದ ಕಾರಣ ಪಟ್ಟಣದ ಚರಂಡಿ ನೀರು ನದಿಗೆ ಸೇರುವುದರಿಂದ ನೀರು ಕಲುಷಿತಗೊಂಡು, ಈ ಅವಧಿಯಲ್ಲಿ ನೀರು ಕುಡಿಯಲು ಯೋಗ್ಯವಾಗಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.
ಈ	ನದಿಗೆ ಕಲುಷಿತ ನೀರು ಸೇರುವುದನ್ನು ತಪ್ಪಿಸಿ, ನದಿಯನ್ನು ಸ್ವಚ್ಛವಾಗಿಡಲು ನದಿಯನ್ನು ಉಳಿಸಲು ಯಾವ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ ; ಈ ಬಗ್ಗೆ ಕೂಡಲೇ ಪರಿಶೀಲಿಸಿ ಸೂಕ್ತ ಕ್ರಮ ಜರುಗಿಸಲಾಗುವುದೇ ?	ಕಲುಷಿತ ನೀರು ಸೇರದಂತೆ ತಡೆಯಲು ಕಾವೇರಿ ನೀರಾವರಿ ನಿಗಮ ವತಿಯಿಂದ ಹುಣಸೂರು ಲಕ್ಷ್ಮಣತೀರ್ಥ ನದಿಯ ಹುಣಸೂರು ಪಟ್ಟಣದ ವ್ಯಾಪ್ತಿಯಲ್ಲಿ ಎರಡು ಇಕ್ಕೆಲಗಳಲ್ಲಿ ಚರಂಡಿ ಮತ್ತು ತಡೆಗೋಡೆ ನಿರ್ಮಿಸಿ ನಗರ ವ್ಯಾಪ್ತಿಯಿಂದ ಹೊರಗೆ ಕಲುಷಿತ ನೀರನ್ನು ಬಿಡಲು ರೂ.36.00 ಕೋಟಿಯ ವಿವರವಾದ ಅಂದಾಜು ಪ್ರಸ್ತಾವನೆಗೆ ನಿಗಮದ ಹಂತದಲ್ಲಿ ಪರಿಶೀಲನೆಯಲ್ಲಿದೆ. 2019-20ನೇ ಸಾಲಿನಲ್ಲಿ ರೂ.1.00 ಕೋಟಿ ಅನುದಾನ ಒದಗಿಸಿಕೊಳ್ಳಲಾಗಿರುತ್ತದೆ.

ಸಂಖ್ಯೆ:ಜಸಂಇ 03 ಎಲ್‌ಎಲ್‌ಎ 2019

(ಡಿ.ಕೆ.ಶಿವಕುಮಾರ್)

ಜಲ ಸಂಪನ್ಮೂಲ ಸಚಿವರು